**ದಿನಾಂಕಃ  13.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿಗಳ ಪರ ವಕೀಲರಿಂದಃ –**

ದಿಃ 05.09.2018 ರಂದು ನನ್ನನ್ನು ಎಸಿಬಿ ಕಛೇರಿಗೆ ನನ್ನ ಮೇಲಾಧಿಕಾರಿಗಳು ಕಳುಹಿಸಿದ್ದು , ಹಿಂದಿನ ದಿನಾಂಕ ಅಂದರೆ 22.07.2024 ರಂದು ಈ ನ್ಯಾಯಾಲಯಕ್ಕೆ ಹಾಜರಾದದ್ದು ಮತ್ತು ಈ ದಿನ ಈ ನ್ಯಾಯಾಲಯಕ್ಕೆ ಹಾಜರಾಗಿರುವುದು "On Duty" ಎನ್ನುವುದು ಸರಿ . ನೀವು ಸಹಿ ಹಾಕಿರುವ ದಾಖಲಾತಿಗಳಿಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಲ್ಲಿ ನಿಮ್ಮ ಮೇಲೆ ಇಲಾಖಾ ವಿಚಾರಣೆಯನ್ನು ನಿಮ್ಮ ಇಲಾಖೆ ಕೈಗೊಳ್ಳುತ್ತದೆ ಅಲ್ಲವೆ ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , ಸುಳ್ಳು ಹೇಳಿದಲ್ಲಿ ಇಲಾಖಾ ವಿಚಾರಣೆಯನ್ನು ನಡೆಸುತ್ತಾರೆ ಎನ್ನುತ್ತಾರೆ. ದಿಃ 05.09.2018 ರಂದು ನನ್ನನ್ನು ನನ್ನ ಮೇಲಾಧಿಕಾರಿಯವರು ಎಸಿಬಿ ಕಛೇರಿಗೆ ಕಳುಹಿಸುವಾಗ , ಇಂತಹವರನ್ನು ಕಳುಹಿಸುತ್ತಿದ್ದೇನೆ ಎಂದು ಮೆಮೋವನ್ನು ನನ್ನ ಕೈಗೆ ನೀಡಿ ಕಳುಹಿಸಿರಲಿಲ್ಲ. ಎಸಿಬಿ ಕಛೇರಿಗೆ ಹೋದ ನಂತರ ಅಲ್ಲಿಯ ಅಧಿಕಾರಿಗಳು ಯಾವ ರೀತಿಯ ಸೂಚನೆಗಳನ್ನು ನೀಡಿದ್ದರೋ , ಆ ರೀತಿ ನಾನು ನಡೆದುಕೊಂಡಿದ್ದೇನೆ ಎನ್ನುವುದು ಸರಿ.

2. ದೂರುದಾರರು ನೀಡಿದ್ದ ಬೆರಳಚ್ಚು ಮಾಡಿದ್ದ ದೂರನ್ನು ನಮಗೆ ಓದಲು ನೀಡಿರಲಿಲ್ಲ ಎನ್ನುವುದು ಸರಿಯಲ್ಲ. ಆ ದೂರಿನಲ್ಲಿ , 6 ತಿಂಗಳ ಹಿಂದೆ ಅರ್ಜಿಯನ್ನು ಕೊಟ್ಟಿದ್ದೆ , 3 ತಿಂಗಳ ಹಿಂದೆ ಬಂದು ವಿಚಾರಿಸಿದ್ದೆ , ಎಂದಿತ್ತು ಎನ್ನುವುದು ಸರಿ . ಟ್ರಾಪ್ ಪ್ರಕ್ರಿಯ ನಡೆದ ನಂತರ ದಾಖಲಾತಿಗಳನ್ನು ಪರಿಶೀಲಿಸುವಾಗ ದೂರುದಾರರು 6 ತಿಂಗಳ

ಹಿಂದೆ ನೀಡಿದ್ದ ಅರ್ಜಿಯನ್ನು ನಾನು ನೋಡಲಿಲ್ಲ. ನಿಡಿ 1 ನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ನಿಮ್ಮ ಸಹಿ ಕಂಡು ಬರುತ್ತದೆ ಎಂದು ಮಾಡಿದ ಸಲಹೆಗೆ ಸಾಕ್ಷಿ 'ಹೌದು ' ಎನ್ನುತ್ತಾರೆ ಮತ್ತು ಸದರಿ ಅರ್ಜಿಯನ್ನು ದಿಃ 21.08.2018 ರಂದು ಪಡೆದಿರುವ ಬಗ್ಗೆ ದಿನಾಂಕವನ್ನು ನಮೂದಿಸಲಾಗಿದೆ ಎನ್ನುವುದು ಸಹ ಕಂಡು ಬರುತ್ತದೆ ಎನ್ನುವುದು ಸರಿ. ದಿಃ 05.09.2018 ಕ್ಕೂ 16 ದಿನಗಳ ಮುಂಚಿತವಾಗಿ ಸದರಿ ಅರ್ಜಯನ್ನು ದೂರುದಾರರು ನೀಡಿರುವುದು ಕಂಡು ಬರುತ್ತದೆ ಎನ್ನುವುದು ಸರಿ . ದೂರಿನಲ್ಲಿ 6 ತಿಂಗಳು ಹಿಂದೆ ಅರ್ಜಯನ್ನು ನೀಡಿದ್ದೆ , ಎಂದಿದ್ದು , ನಿಡಿ 1 ರಲ್ಲಿ ದಿಃ 21.08.2018 ರಂದು ಅರ್ಜಿಯನ್ನು ಕಛೇರಿಯಲ್ಲಿ ಪಡೆದಿರುವ ಬಗ್ಗೆ ನಮೂದು ಇದ್ದು, ಈ ಬಗ್ಗೆ ಯಾವುದು ಸರಿ ಎಂದು ನಾನು ದೂರುದಾರರಲ್ಲಿ ಕೇಳಿರುವುದಿಲ್ಲ. ನಿಪಿ 2 ಮಹಜರ್ ನಲ್ಲಿ ನಮೂದಾಗಿರುವ ಸಂಭಾಷಣೆಯಲ್ಲಿ ರೂ.12,000/- ಕ್ಕೆ ಬೇಡಿಕೆ ಇಟ್ಟಿರುವುದು ಕಂಡು ಬರುವುದಿಲ್ಲ. ಮೊಬೈಲ್ ನಲ್ಲಿ ವಿಡಿಯೋ ಮಾಡಿದಾಗ ವ್ಯಕ್ತಿಗಳು ಕಾಣಿಸುತ್ತಾರೆ ಎನ್ನುವುದು ಸರಿ. ದೂರಿನಲ್ಲಿ, ಮೊಬೈಲ್ ನ ಕ್ಯಾಮರಾದಲ್ಲಿ ರೆಕಾರ್ಡ ಮಾಡಿಕೊಂಡಿರುತ್ತೇನೆ ಎಂದಿದೆ ಎನ್ನುವುದು ಸರಿ. ವಹಿಸುವಿಕೆ ಮಹಜರ್ ಕಾಲದಲ್ಲಿ ಮೊಬೈಲ್ ನ ಕ್ಯಾಮರಾದಲ್ಲಿ ವಿಡಿಯೋ ಮಾಡಿದ್ದನ್ನು ನಮಗೆ ತೋರಿಸಿರುವುದಿಲ್ಲ. ದೂರುದಾರರ ಮೊಬೈಲ್ ಚಿಪ್ ನಿಂದ ಲ್ಯಾಪ್ ಟಾಪಿ ಗೆ ಅಳವಡಿಸಿ ಸಂಭಾಷಣೆಯನ್ನು ಕೇಳಿಸಿದಾಗ , ನಾನು ದೂರುದಾರರಲ್ಲಿ ನೀವು ಮೊಬೈಲ್ ಕ್ಯಾಮರಾದಲ್ಲಿ ವಿಡಿಯೋ ಮಾಡಿರುತ್ತೇನೆ ಎಂದು ತಿಳಿಸಿರುತ್ತೀರಿ ಆದರೆ ಇಲ್ಲಿ ಕೇವಲ ಆಡಿಯೋ ಇದೆ , ವಿಡಿಯೋ ಏಕೆ ಇಲ್ಲ ಎಂದು ಕೇಳಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಿಪಿ 2 ರಲ್ಲಿರುವಂತೆ ಪ್ರಕ್ರಿಯಗಳು ನಡೆದಿರುವುದಿಲ್ಲ

ಎನ್ನುವುದು ಸರಿಯಲ್ಲ. ನಿಪಿ 2 ರಲ್ಲಿ , ನಾನು ಹಣವನ್ನು ದೂರುದಾರರ ಒಂದು ಸಣ್ಣ ಪರ್ಸ ನಲ್ಲಿ , ಆ ಪರ್ಸನಲ್ಲಿ ಬೇರೆ ಯಾವುದೇ ಹಣ ಮತ್ತು ವಸ್ತು ಇರುವುದಿಲ್ಲ ಎನ್ನುವುದನ್ನು ಖಚಿತ ಪಡಿಸಿಕೊಂಡು ನಂತರ ಇಟ್ಟೆ , ಎನ್ನುವುದನ್ನು ನಮೂದಿಸಲಾಗಿದೆ. ನಿಪಿ 2 ರಲ್ಲಿ ಈ ಬಗ್ಗೆ ನಮೂದು ಮಾಡಿರುವುದಿಲ್ಲ ಎನ್ನುವುದು ಸರಿಯಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

3. ತನಿಖಾಧಿಕಾರಿಯವರು ಚಾ,ಸಾ. 1 ಮತ್ತು ನವೀದ್ ಪಾಷ ರವರಿಗೆ ಕಛೇರಿಗೆ ಹೋದ ನಂತರ ಏನು ಮಾಡಬೇಕು ಎನ್ನುವ ಬಗ್ಗೆ ಯಾವುದೇ ಸೂಚನೆಯನ್ನು ನೀಡಿರಲಿಲ್ಲ ಎನ್ನುವುದು ಸರಿಯಲ್ಲ. ಆ ಲ್ಯಾಪ್ ಟಾಪ್ ಯಾವ ಕಂಪನಿಗೆ ಸೇರಿತ್ತು ಎಂದು ನನಗೆ ಈಗ ಹೇಳಲಾಗುವುದಿಲ್ಲ. ಮೊಬೈಲ್ ನಲ್ಲಿದ್ದ ಚಿಪ್ಪನ್ನು ಲ್ಯಾಪ್ ಟಾಪ್ ಗೆ ಅಳವಡಿಸಿ ನಂತರ ಸಂಭಾಷಣೆಯನ್ನು ಸಿಡಿಗಳಿಗೆ ವರ್ಗಾಯಿಸಿದ್ದು ಇನ್ಸ್ ಪೆಕ್ಟರ್ ಶೇಖರ್ ರವರು. ಮೂರು ಸಿಡಿಗಳನ್ನು ಪ್ಯಾಕ್ ಮಾಡಿ ಮೊಹರು ಮಾಡಿದರು. ಆ ಸಿಡಿ ಗಳಲ್ಲಿ ಸಂಭಾಷಣೆ ರೆಕಾರ್ಡ ಆಗಿದೆಯೋ ಇಲ್ಲವೋ ಎನ್ನುವ ಬಗ್ಗೆ ಪುನಃ ಅವುಗಳನ್ನು ಪ್ಲೇ ಮಾಡಿ ನೋಡಿರುವುದಿಲ್ಲ. ಮೊಬೈಲ್ ಚಿಪ್ಪಿನಿಂದ ಲ್ಯಾಪ್ ಟಾಪ್ ಮೂಲಕ ಸಿಡಿ ಗಳಿಗೆ ಸಂಭಾಷಣೆಯನ್ನು ವರ್ಗಾಯಿಸಿದಾಗ ಸಿಡಿ ಗಳಲ್ಲಿ ಕಾಣಬರುವ ಎರಡು ದಿನಾಂಕಗಳನ್ನು ನಾನು ಪರಿಶೀಲಿಸಿರುವುದಿಲ್ಲ. ಆ ಮೂರು ಸಿಡಿ ಗಳನ್ನು ಮತ್ತು ಫಿನಾಪ್ತಲೀನ್ ಪೌಡರ್ ನ್ನು ಎಸಿಬಿ ಕಛೇರಿಯ ಬೀರುಗಳಲ್ಲಿ ಭದ್ರವಾಗಿ ಇಟ್ಟರು. ಆ ಸಂಭಾಷಣೆಯಲ್ಲಿ , ಟ್ಯಾಕ್ಸ ಕಟ್ಟಿಲ್ಲ, ಕಂದಾಯದ ಬಗ್ಗೆ ಮಾತುಕತೆ ಇತ್ತು ಎನ್ನುವುದು ಸರಿಯಲ್ಲ.ನಾನು ಅಲ್ಲಿ ಪ್ರಕ್ರಿಯಗಳು ಹೇಗೆ

ನಡೆಯುತ್ತಿದ್ದವು ಎನ್ನುವುದನ್ನು ಸರಿಯಾಗಿ ಪರಿಶೀಲಿಸದೇ ಇರುವುದರಿಂದ ಈ ಬಗ್ಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ.

4. ದಿಃ 05.09.2018 ರಂದು ಮಧ್ಯಾಹ್ನ 02.30 ಕ್ಕೆ ಎಸಿಬಿ ಕಛೇರಿಯನ್ನು ಬಿಟ್ಟೆವು. ಆ ದಿನ ದೂರುದಾರರ ಮನೆಯ ಹತ್ತಿರಕ್ಕೆ ಹೋದೆ. ಆರೋಪಿ ದೂರುದಾರರಲ್ಲಿ ಪೋನ್ ಮೂಲಕ ಮರು ದಿನ ಬೆಳಿಗ್ಗೆ 10.30 ಕ್ಕೆ ಕಛೇರಿಗೆ ಬರಲು ಹೇಳಿದ್ದರಿಂದ ನಾವುಗಳು ವಾಪಾಸ್ಸು ಎಸಿಬಿ ಕಛೇರಿಗೆ ಬಂದೆವು. ಈ ಸಂಭಾಷಣೆಯನ್ನು ದೂರುದಾರರು ರೆಕಾರ್ಡ ಮಾಡಿಕೊಂಡಿದ್ದರು. ಆ ಸಂಭಾಷಣೆಯಲ್ಲಿ ಆರೋಪಿ ಹಣ ಕಾಸಿನ ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಆರೋಪಿ ಹಣಕಾಸಿನ ವಿಚಾರವನ್ನು ಪ್ರಸ್ತಾಪ ಮಾಡಿರುವುದೇ ಇಲ್ಲ ಎನ್ನುವುದು ಸರಿಯಲ್ಲ.

5. ನಾನು ಸಹಿ ಹಾಕಿರುವ ಎರಡೂ ಮಹಜರ್ ಗಳಲ್ಲಿ, ಹೀಗೆಯೇ ಬರೆಯಬೇಕು ಎಂದು ನಾನು ಖುದ್ದು ಉಕ್ತಲೇಖನವನ್ನೇನು ನೀಡಿರುವುದಿಲ್ಲ.

6. ಮರು ದಿನ ಬೀರುವಿನಲ್ಲಿ ಇಟ್ಟಿದ್ದ ಕವರ್ ನಿಂದ ಹಣವನ್ನು ತೆಗೆದ ಬಗ್ಗ ಟ್ರಾಪ್ ಮಹಜರ್ ನಲ್ಲಿ ನಮೂದಿಸಲಾಗಿದೆ. ನಾನು ಆ ಹಣವನ್ನು ದೂರುದಾರರ ಸಣ್ಣ ಪರ್ಸ ನಲ್ಲಿ ಇಟ್ಟ ಬಗ್ಗೆಯೂ ಟ್ರಾಪ್ ಮಹಜರ್ ನಲ್ಲಿ ನಮೂದಿಸಲಾಗಿದೆ. ಇವುಗಳನ್ನು ಟ್ರಾಪ್ ಮಹಜರ್ ನಲ್ಲಿ ನಮೂದಿಸಲಾಗಿರದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮರು ದಿನ ಬೀರುವಿನಲ್ಲಿ ಇಟ್ಟಿದ್ದ ಕವರ್ ನಿಂದ ಹಣವನ್ನು ತೆಗೆದ ಬಾಬ್ತು ಪ್ರತ್ಯೇಕ ಮಹಜರ್ ನ್ನೇನು ಮಾಡಿರುವುದಿಲ್ಲ. ನಾವುಗಳೆಲ್ಲರೂ ಕೈ ತೊಳೆದುಕೊಂಡ ಬಗ್ಗೆ ಪೋಟೋವನ್ನು ತೆಗೆದಿರುತ್ತಾರೋ ಇಲ್ಲವೋ ಎನ್ನುವುದು ನನಗೀಗ ನೆನಪಿಲ್ಲ.

7. ನಾವು ಹೋದ ಆ ಎರಡು ಇಲಾಖಾ ವಾಹನಗಳ ನಂಬರ್ ಗಳನ್ನು ನನಗೆ ಈಗ ಹೇಳಲು ಆಗುವುದಿಲ್ಲ. ವಾಹನಗಳನ್ನು ಕಛೇರಿಯಿಂದ ಸುಮಾರು 500 ಮೀಟರ್ ದೂರದಲ್ಲಿ ನಿಲ್ಲಿಸಿದ್ದೆವು. ದೂರುದಾರರು ಮತ್ತು ನವೀದ್ ಪಾಷ ರವರು ಕಛೇರಿಗೆ ಹೋದರು. ನಾವೆಲ್ಲರೂ ವಾಹನಗಳ ಬಳಿಯಲ್ಲೇ ಇದ್ದೆವು. ಆರೋಪಿಯ ಕಛೇರಿ ಇದ್ದದ್ದು ನೆಲ ಮಹಡಿಯಲ್ಲಿ . ನಾನು ನಿಂತಿದ್ದ ಜಾಗದಿಂದ ದೂರುದಾರರು ಮತ್ತು ನವೀದ್ ಪಾಷ ರವರು ಕಛೇರಿಯ ಒಳಗೆ ಹೋಗಿ, ಬರುವುದು ಕಾಣುತ್ತಿತ್ತು. ಆ ಕಛೇರಿಯಿಂದ ಹೊರಗೆ ಬಂದ ನಂತರ ಅವರು ಕಾಣುತ್ತಿದ್ದರು ಎನ್ನುವುದು ಸರಿ. ದೂರುದಾರರು ಯಾವ ಜಾಗದಲ್ಲಿ ನಿಂತು ಸೂಚನೆ ಕೊಟ್ಟರು ಎನ್ನುವುದನ್ನು ಟ್ರಾಪ್ ಮಹಜರ್ ನಲ್ಲಿ ನಮೂದಿಸಿರುವುದಿಲ್ಲ, ಆದರೆ ಕಛೇರಿಯಿಂದ ಹೊರಗೆ ಬಂದು ಸೂಚನೆ ಕೊಟ್ಟರು ಎಂದು ನಮೂದಿಸಲಾಗಿದೆ. ಆಕೆ ಸೂಚನೆ ಕೊಟ್ಟ 3-4 ನಿಮಿಷಗಳಲ್ಲಿ ಆ ಕಛೇರಿಯ ಒಳಕ್ಕೆ ನಾವೆಲ್ಲರೂ ಹೋದೆವು. ದೂರುದಾರರು ತನಿಖಾಧಿಕಾರಿಗೆ ಆರೋಪಿಯನ್ನು ತೋರಿಸಿದರು. ನಂತರ ಅವರ ಸಿಬ್ಬಂದಿ ಆರೋಪಿಯನ್ನು ಹಿಡಿದುಕೊಂಡರು. ದೂರುದಾರರು ಆರೋಪಿಯನ್ನು ತೋರಿಸಿದಾಗ, ಆರೋಪಿ ಅಲ್ಲಿಂದ ತಪ್ಪಿಸಿಕೂಂಡು ಹೋಗಲು ಪ್ರಯತ್ನ ಪಟ್ಟಿರುವುದಿಲ್ಲ. ಅಲ್ಲಿ ದೂರುದಾರರು ತನಿಖಾಧಿಕಾರಿಗೆ 'ಇವರೇ ಮರಪ್ಪ, ಇವರು ನನ್ನಲ್ಲಿ ಲಂಚದ ಹಣಕ್ಕೆ ಬೇಡಿಕೆ ಇಟ್ಟು , ಪಡೆದುಕೊಂಡಿರುತ್ತಾರೆ ' ಎಂದು ಹೇಳಿರುವುದಿಲ್ಲ ಎನ್ನುವುದು ಸರಿಯಲ್ಲ. ದೂರುದಾರರು , ನಾನು ಆತನಿಗೆ ಕಂದಾಯದ ಹಣವನ್ನು ಕೊಟ್ಟಿರುತ್ತೇನೆ ,' ಎಂದು ಹೇಳಿರುತ್ತಾರೆ ಎನ್ನುವುದು ಸರಿಯಲ್ಲ. ನವೀದ್ ಪಾಷ ರವರು ದೂರದಿಂದ ನಾನು ಇದನ್ನೆಲ್ಲಾ ನೋಡುತ್ತಿದ್ದೆ , ಎಂದು ಹೇಳಿರುವುದಿಲ್ಲ ಎನ್ನುವುದು ಸರಿಯಲ್ಲ. ಇದನ್ನು ಟ್ರಾಪ್

ಮಹಜರ್ ನಲ್ಲಿ ನಮೂದಿಸಲಾಗಿದೆ. ಈ ಬಗೆ ಟ್ರಾಪ್ ಮಹಜರ್ ನಲ್ಲಿ ನಮೂದಿಸಿರದಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಟ್ರಾಪ್ ಮಹಜರ್ ನಲ್ಲಿ , 'ಕೈ ತೋರಿಸಿ ಸನ್ನೆ ಮಾಡಿದರು ' ಎಂದು ನಮೂದಿಸಲಾಗಿದೆ. ಈ ರೀತಿ ನಮೂದಿಸಿರುವುದಿಲ್ಲ ಎನ್ನುವುದು ಸರಿಯಲ್ಲ.

8. ಆ ಕಛೇರಿಯಲ್ಲಿ ನಡೆದ ಪ್ರಕ್ರಿಯಗಳನ್ನು ತನಿಹಾಧಿಕಾರಿ ಮತ್ತು ಅವರ ಸಿಬ್ಬಂದಿ ಪ್ರಕರಣಕ್ಕೆ ಅನುಕೂಲಕರವಾಗುವ ರೀತಿಯಲ್ಲಿ ಮಾಡಿಕೊಂಡಿರುತ್ತಾರೆ ಎನ್ನುವುದು ಸರಿರಯಲ್ಲ. ಆರೋಪಿ ತನ್ನ ಪ್ಯಾಂಟ್ ನ ಜೇಬಿನಿಂದ ಹಣವನ್ನು ತೆಗೆದು ಅದು ಕಲೆಕ್ಟ ಮಾಡಿದ ಟ್ಯಾಕ್ಸ ಹಣ ಎಂದು ತೋರಿಸಿರುತ್ತಾರೆ ಎನ್ನುವುದು ಸರಿಯಲ್ಲ. ಟ್ರಾಪ್ ಮಹಜರ್ ನಲ್ಲಿ ಆರೋಪಿಗೆ ಪ್ರತ್ಯೇಕ ಪ್ಯಾಂಟ್ ನ ವ್ಯವಸ್ಥೆ ಮಾಡಿದರು ಎಂದು ನಮೂದಿಸಲಾಗಿದೆ. ಆದರೆ ಆ ಪ್ಯಾಂಟ್ ನ್ನು ಎಲ್ಲಿಂದ ತರಿಸಿದರು ಮತ್ತು ಅದರ ಬಣ್ಣ ಯಾವುದೇ ಎನ್ನುವುದನ್ನು ನಮೂದಿಸಿರುವುದಿಲ್ಲ. ಆರೋಪಿ ಧರಿಸಿದ್ದ ಪ್ಯಾಂಟ್ ಗೆ ಬಲ ಜೇಬು ಇತ್ತೋ ಇಲ್ಲವೋ ಎನ್ನುವುದು ನನಗೆ ನೆನಪಿಲ್ಲ. ಆ ಪ್ಯಾಂಟ್ ಜೇಬಿನ ಬಟ್ಟೆ ಯಾವ ಬಣ್ಣದ್ದಾಗಿತ್ತು ಎನ್ನುವುದು ನನಗೀಗ ನೆನಪಿಲ್ಲ. ಆ ಜೇಬಿನ ಬಟ್ಟೆ ಒದ್ದೆಯಾಗಿದ್ದರಿಂದ ಅದು ಯಾವ ಬಣ್ಣಕ್ಕೆ ತಿರುಗಿತ್ತು ಎನ್ನುವುದು ಗೊತ್ತಾಗಲಿಲ್ಲ. ಈ ಬಗ್ಗೆ ಮಹಜರ್ ನಲ್ಲಿ ನಮೂದಿಸಿರುವುದಿಲ್ಲ.

9. ಫಿರ್ಯಾದುದಾರರು ತಮಗೆ ಕೊಟ್ಟಿದ್ದ ವಾಯ್ಸು ರೆಕಾರ್ಡರ್ ನ್ನು ಆರೋಪಿಯನ್ನು ಎಸಿಬಿ ತನಿಖಾಧಿಕಾರಿ ಮತ್ತು ಸಿಬ್ಬಂದಿಗಳು ಹಿಡಿದುಕೊಂಡ ನಂತರ, ತನಿಖಾಧಿಕಾರಿಯವರಿಗೆ ನೀಡಿದರು. ದೂರುದಾರರು , ಆರೋಪಿಯನ್ನು ತೋರಿಸಿ ,

ಈತನೇ ಮರಪ್ಪ , ಈತ ನನ್ನಿಂದ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಪಡೆದುಕೊಂಡಿರುತ್ತಾನೆ, ಎನ್ನುವ ಮಾತು ಅದರಲ್ಲಿ ರೆಕಾರ್ಡ ಆಗಿತ್ತೋ ಇಲ್ಲವೋ ಎನ್ನುವುದು ನನಗೀಗ ನೆನಪಿಲ್ಲ. ವಾಯ್ಸು ರೆಕಾರ್ಡರ್ ನಲ್ಲಿ ಟ್ಯಾಕ್ಸ ಬಗ್ಗೆ ಸಂಭಾಷಣೆ ಇತ್ತು ಎನ್ನುವುದು ಸರಿಯಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಲ್ಯಾಪ್ ಟಾಪ್ ಗೆ ವಾಯ್ಸು ರೆಕಾರ್ಡರ್ ನ್ನು ಅಳವಡಿಸಿ ಸಂಭಾಷಣೆಯನ್ನು ನಮಗೆ ಕೇಳಿಸಿದವರು ತನಿಖಾಧಿಕಾರಿಯವರು. ಟ್ರಾಪ್ ಮಹಜರ್ ನಲ್ಲಿ ವಾಯ್ಸು ರೆಕಾರ್ಡರ್ ನಿಂದ ಸಂಭಾಷಣೆಯನ್ನು ಲ್ಯಾಪ್ ಟಾಪ್ ಗೆ ವರ್ಗಾಯಿಸುವಾಗ ಏನೆಲ್ಲಾ ಕ್ರಮ ಕೈಗೊಂಡಿರುತ್ತಾರೆ ಎನ್ನುವುದನ್ನು ನಮೂದಿಸಿರುವುದಿಲ್ಲ. ನನ್ನ ಎದುರು ಈ ಬಗ್ಗ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎನ್ನುವುದು ಸರಿಯಲ್ಲ.

10. ಮಾದರಿ ಧ್ವನಿಯನ್ನು ಪಡೆಯುವ ಮೊದಲು ಆರೋಪಿಯಿಂದ ಒಪ್ಪಿಗೆ ಪತ್ರವನ್ನೇನು ಪಡೆದಿರುವುದಿಲ್ಲ. ಆರೋಪಿಯ ಮಾದರಿ ಧ್ವನಿಯನ್ನು ಆ ದಿನ ಅಲ್ಲಿ ಸಂಗ್ರಹಿಸಿರುವುದಿಲ್ಲ ಎನ್ನುವುದು ಸರಿಯಲ್ಲ.

11. ಪಿಡಿಒ ರವರು ಹಾಜರುಪಡಿಸಿದ ದಾಖಲಾತಿಗಳಿಗೆ ನಾನು ಸಹಿ ಮಾಡಿರುತ್ತೋನೋ ಇಲ್ಲವೋ ಎನ್ನುವುದು ನನಗೀಗ ನೆನಪಿಲ್ಲ. ಆ ದಾಖಲಾತಿಗಳಲ್ಲಿ ಫಿರ್ಯಾದುದಾರರಿಗೆ ಸಂಬಂಧಪಟ್ಟ ಕೆಲಸ ಆರೋಪಿಯ ಬಳಿಯಲ್ಲಿ ಬಾಕಿ ಇದ್ದ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ಪರಿಶೀಲಿಸಿರುವುದಿಲ್ಲ.

12. ಆರೋಪಿ ತನ್ನ ಲಿಖಿತ ವಿವರಣೆಯಲ್ಲಿ , ಫಿರ್ಯಾದುದಾರರ ಸ್ವತ್ತಿಗೆ ಸಂಬಂಧಪಟ್ಟಂತೆ ಕಂದಾಯ ಬಾಕಿ ಇದ್ದು, ಅದನ್ನು ಪಡೆದಿರುತ್ತೇನೆ ಎಂದು

ಬರೆದುಕೊಟ್ಟಿದ್ದರು ಎನ್ನುವುದು ಸರಿ. ಫಿರ್ಯಾದುದಾರರು ಇದನ್ನು ಅಲ್ಲಗಳೆದಿರಲಿಲ್ಲ ಎನ್ನುವುದು ಸರಿಯಲ್ಲ.

13. ಅಲ್ಲಿ ಎಸಿಬಿ ಸಿಬ್ಬಂದಿ ಪೋಟೋಗಳನ್ನು ಮೊಬೈಲ್ ನಲ್ಲಿ ತೆಗೆಯುತ್ತಿದ್ದರು. ನಿಪಿ 11 ರಿಂದ 19 ಪೋಟೋಗಳು ನೈಜ್ಯ ಪೋಟೋಗಳಾಗಿರುವುದಿಲ್ಲ ಎನ್ನುವುದು ಸರಿಯಲ್ಲ.

14. ಮಹಜರ್ ಗಳನ್ನು ಓದಿ ನೋಡಿ ಸಹಿ ಹಾಕಿರುತ್ತೇನೆ. ಮಹಜರ್ ಗಳನ್ನು ತನಿಖಾಧಿಕಾರಿಯವರು ಪ್ರಕರಣಕ್ಕೆ ಅನುಕೂಲಕರವಾಗುವಂತೆ ಮಾಡಿಕೊಂಡಿರುತ್ತಾರೆ ಎನ್ನುವುದು ಸರಿಯಲ್ಲ. ಆರೋಪಿಯ ಕಛೇರಿ ನೆಲ ಮಹಡಿಯಲ್ಲಿದ್ದು. ಆ ಕಟ್ಟಡಕ್ಕೆ ಮೇಲಿನ ಮಹಡಿ ಇತ್ತೋ ಇಲ್ಲವೋ ನೆನಪಿಲ್ಲ. ನಾವು ಆ ಕಛೇರಿಯ ಒಳಕೆಕ ಹೋದಾಗ ಈ ಆರೋಪಿಯನ್ನು ಹೊರತು ಪಡಿಸಿ ಬೇರೆಯಾರೂ ಕಛೇರಿಯಲ್ಲಿ ಇರಲಲ್ಲ. ಪಿಡಿಒ ರವರನ್ನು ಸಿಬ್ಬಂದಿ ಹೋಗಿ ಒಳಗಿನಿಂದ ಕರೆದುಕೊಂಡು ಬಂದರು. ಬೇರೆ ಬೇರೆ ರೂಂಗಳಲ್ಲಿ ಬೇರೆ ಬೇರೆ ಸಿಬ್ಬಂದಿ ಇದ್ದರೋ ಇಲ್ಲವೋ ನಾನು ಗಮನಿಸಿರುವುದಿಲ್ಲ. ಆ ಕಛೇರಿಯ ಅಕ್ಕ ಪಕ್ಕ , ಹಿಂಭಾಗ ಮನೆಗಳಿವೆ ಎನ್ನುವುದು ಸರಿ .

15. ತನಿಖಾಧಿಕಾರಿಯವರು ಅಲ್ಲಿ ಸ್ಥಳೀಯರನ್ನು ಪಂಚರಾಗಿ ಬರ ಮಾಡಿಕೊಂಡಿರುವುದಿಲ್ಲ. ಆರೋಪಿ ಪಡೆದದ್ದು ಕಂದಾಯದ ಹಣ ಎಂದು ಗೊತ್ತಿದ್ದರೂ ಸಹ ಇಲಾಖಾ ವಿಚಾರಣೆಗೆ ಹೆದರಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿಯ ಇಲಾಖಾ ವಿಚಾರಣೆಯಲ್ಲಿ ನಾನು ಒಮ್ಮೆ ಸಾಕ್ಷಿ ಹೇಳಿ ಬಂದಿದ್ದೇನೆ. ಈಗ ತೋರಿಸುತ್ತಿರುವ ಹೇಳಿಕೆ ನಾನು ಆರೋಪಿಯ ಇಲಾಖಾ ವಿಚಾರಣೆಯಲ್ಲಿ ನುಡಿದ ಹೇಳಿಕೆ

ಆಗಿರುತ್ತದೆ ಎನ್ನುವುದು ಸರಿ . ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಹೇಳಿಕೆಯನ್ನು ನಿಡಿ 4 ಎಂತಲು, ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಡಿ 4(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ಸದರಿ ಹೇಳಿಕೆಯಲ್ಲಿ ನಾನು ಸ್ವಲ್ಪ ತಪ್ಪಾಗಿ ಸಾಕ್ಷ್ಯ ನುಡಿದಿದ್ದೇನೆ. ಸದರಿ ಹೇಳಿಕೆಗೆ ಸಹಿ ಹಾಕುವ ಮೊದಲು ನನಗೆ ಅದನ್ನು ಓದಲು ಕೊಟ್ಟಿದ್ದರು ಎನ್ನುವುದು ಸರಿ . ಓದಿ ನೋಡಿ ಸಹಿ ಹಾಕಿರುತ್ತೇನೆ ಎನ್ನುವುದು ಸರಿ . ಆಗ ಅಧಿಕಾರಿಯ ಮುಂದೆ ನಾನು ತಪ್ಪಾಗಿ ಹೇಳಿದ್ದೇನೆ, ಎಂದೇನು ಹೇಳಿರುವುದಿಲ್ಲ. ಈಗ ಲೋಕಾಯುಕ್ತದವರು ಹೇಳಿ ಕೊಟ್ಟಿರುವುದರಿಂದ ಈಗ ಮೇಲ್ಕಂಡ ರೀತಿಯಲ್ಲಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.